**O.S.3504/2007**
**C/w**
**OS No.3505/2007**
**CW-1**

**ದಿನಾಂಕಃ 23.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>**

1. ನನಗೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಅಧಿಕೃತ ಜ್ಞಾಪನವನ್ನು ನೀಡುವಾಗ ಅದರೊಂದಿಗೆ ಈ ನ್ಯಾಯಾಲಯದಲ್ಲಿ ನಿಶಾನೆಯಾಗಿ ಗುರುತಾಗಿದ್ದ ದಾಖಲೆಗಳ ಪ್ರತಿಗಳನ್ನು ಸಹಾ ನೀಡಿದ್ದರು ಎಂದರೆ ಸರಿ. ಸದರಿ ದಾಖಲೆಗಳಲ್ಲಿ ವಾದಿಗಳ ಕ್ರಯ ಪತ್ರದ ದಾಖಲೆಗಳು ಸಹಾ ಇದ್ದವು ಎಂದರೆ ಸರಿ. ನನ್ನ ವರದಿಯಲ್ಲಿ ಸರ್ವೆ ನಂಬರ್ 48/1 ಹಾಗೂ 48/2 ನ್ನು ಗಳನ್ನು ನಮೂದಿಸಲು ನನಗೆ ಇದ್ದ ಆಧಾರ ಕಛೇರಿಯಲ್ಲಿ ಪಡೆದ ಹಿಸ್ಸಾ ಟಿಪ್ಪಣಿ, ಆರ್ ಆರ್ ಪಕ್ಕ ಗಳ ಎಡ ಮತ್ತು ಬಲ ಇವುಗಳ ನಕಲುಗಳು. ಸದರಿ ದಾಖಲಾತಿಗಳನ್ನು ನಾನು ನನ್ನ ವರದಿಯೊಂದಿಗೆ ಲಗತ್ತಿಸಿರುತ್ತೇನೆ. ಅವುಗಳು ನಮ್ಮ ಕಚೇರಿಗೆ ಕಮಿಷನರ್ ವಾರೆಂಟ್ ಜೊತೆ ಬಂದಿದ್ದ ನ್ಯಾಯಾಲಯದಲ್ಲಿ ನಿಶಾನೆಗಳಾಗಿ ಗುರುತಾಗಿದ್ದ ದಾಖಲೆಗಳ ದೃಢೀಕೃತ ನಕಲುಗಳ ಪೈಕಿ ನಿಡಿ 19 ರಿಂದ ನಿಡಿ 24 ರ ದಾಖಲೆಗಳು. ಸರ್ವೆ ನಂಬರ್ 48 ರಲ್ಲಿ ಒಟ್ಟು ವಿಸ್ತೀರ್ಣ 2 ಎಕರೆ 17 ಗುಂಟೆ. ಸರ್ವೆ ನಂಬರ್ 48/2 ರ ಸ್ವತ್ತು ಮಂಜುಳಮ್ಮ ರವರು ಕ್ರಯ ಪತ್ರದ ಪ್ರಕಾರ ಖರೀದಿ ಮಾಡಿದ ನಂತರ ಪೋಡಿಯಾದ ಸ್ವತ್ತು ಎಂದರೆ ಸರಿ. ನಾನು ಸರ್ವೆ ನಂಬರ್ 48/1 ರ ಜಮೀನಿಗೆ ಹೋಗಿದ್ದಾಗ ಅದು ಅಭಿವೃದ್ದಿ ಹೊಂದಿ ಅವುಗಳಲ್ಲಿ ಕಟ್ಟಡಗಳನ್ನು ಕಟ್ಟಿದ್ದರು. ನಾನು ಸರ್ವೆ ನಂಬರ್ 48/1 ಹಾಗೂ 48/2 ರ ಜಮೀನುಗಳಿಗೆ ಹೋಗಿದ್ದಾಗ ಅವುಗಳಲ್ಲಿ ಕೃಷಿ ಚಟುವಟಿಕೆಗಳು

ನಡೆಯುತ್ತಿರಲಿಲ್ಲ. ಸರ್ವೆ ನಂಬರ್ 48/1ರ ಜಮೀನಿನಲ್ಲಿ ಅಭಿವೃದ್ಧಿ ಹೊಂದಿ ಕಟ್ಟಡಗಳು ಇರುವುದನ್ನು ನನ್ನ ವರದಿಯಲ್ಲಿ ತೋರಿಸಿದ್ದೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ಸೂಚನೆಗಳನ್ನು ಉತ್ತರಿಸುವಾಗ ಅದರಲ್ಲಿ ಆ ಬಗ್ಗೆ ನಮೂದಿಸಿದ್ದೇನೆ. ನಾನು ಸ್ಥಳಕ್ಕೆ ಹೋದಾಗ ಅಲ್ಲಿಯ ನಿವೇಶನಗಳು ನಿಪಿ 16 ವಾಸ್ತವತೆಯನ್ನು ಹೊಂದಿತ್ತೆ ಎಂದರೆ ಸಾಕ್ಷಿ ನುಡಿಯುತ್ತಾರೆ ಇಲ್ಲ, ಭಾಗಶಃ ನಿವೇಶನ ಸಂಖ್ಯೆಗಳು ನಿಪಿ 6 ರಲ್ಲಿ ನಮೂದಿಸಿರುವ ನಿವೇಶನ ಸಂಖ್ಯೆಗಳಿಗೆ ತಾಳೆಯಾಗುತ್ತಿಲ್ಲ. ನನ್ನ ವರದಿಯ ಖಂಡಿಕೆ ಸಂಖ್ಯೆ 3 ರಲ್ಲಿ ನಮೂದಿಸಿರುವ ನಿವೇಶನ ಸಂಖ್ಯೆಗಳು ನಿಪಿ 16 ರಲ್ಲಿ ಸಹಾ ನಮೂದು ಇದೆ. ನಿಪಿ 16 ರಲ್ಲಿಯೂ ಸಹಾ ನನ್ನ ವರದಿಯ ಖಂಡಿಕೆ ಸಂಖ್ಯೆ 3 ರಲ್ಲಿ ನಮೂದಿಸಿದಂತೆ ನಿವೇಶನ ಸಂಖ್ಯೆ 2 ಕ್ಕೆ ಹೊಂದಿಕೊಂಡು ನಿವೇಶನ ಸಂಖ್ಯೆ 1 ಎ ಇರುವುದಾಗಿ ನಮೂದಿಸಿದ್ದೇನೆ ಎಂದರೆ ಸರಿ. ಸ್ಥಳದಲ್ಲಿ ವಾಸ್ತವತೆಯಲ್ಲಿ ನಿಪಿ 16 ರಲ್ಲಿ ತೋರಿಸಿರುವ ನಿವೇಶನ ಸಂಖ್ಯೆ 1 ಹಾಗೂ ಅದರ ಉತ್ತರಕ್ಕೆ ಇರುವ ನಿವೇಶನ ಸಂಖ್ಯೆ 1 ಎ ನಲ್ಲಿ ಯಾವುದೇ ಕಟ್ಟಡಗಳು ಇಲ್ಲ ಹಾಗೂ ಅವು ಖಾಲಿ ಇದೆ ಎಂದರೆ ಸರಿ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಿಪಿ 16 ರಲ್ಲಿ ತೋರಿಸಿರುವ ನಿವೇಶನ ಸಂಖ್ಯೆ 2 ರ ಉತ್ತರಕ್ಕೆ ಇರುವ ನಿವೇಶನ ಸಂಖ್ಯೆ 1 ಎ (ನಿಪಿ 16 ರಲ್ಲಿ ತೋರಿಸಿರುವ ನಿವೇಶನ ಸಂಖ್ಯೆ 1 ರ ದಕ್ಷಿಣಕ್ಕೆ ಇರುವ ನಿವೇಶನ ಸಂಖ್ಯೆ 1 ಎ) ನಿವೇಶನದಲ್ಲಿ ಭಾಗಶಃ ಕಟ್ಟಡ ಇದೆ. ನಿಪಿ 16 ರಲ್ಲಿ ತೋರಿಸಿರುವ ನಿವೇಶನ ಸಂಖ್ಯೆ 1 ರ ಹಾಗೂ ಅದರ ಉತ್ತರಕ್ಕೆ ಇರುವ ನಿವೇಶನ ಸಂಖ್ಯೆ 1 ಎ ಸ್ವತ್ತು ಸರ್ವೆ ನಂಬಸರ್ 48/2 ಎಂದು ಪೋಡಿಯಾಗಿದೆ ಎಂದರೆ ಸಾಕ್ಷಿ ನುಡಿಯುತ್ತಾರೆ ನಿಪಿ 16 ರಲ್ಲಿ ತೋರಿಸಿರುವ ನಿವೇಶನ ಸಂಖ್ಯೆ 2 ರ ಉತ್ತರಕ್ಕೆ ಇರುವ

ನಿವೇಶನ ಸಂಖ್ಯೆ 1 ಎ ಸ್ವತ್ತಿನ ವಿಸ್ತೀರ್ಣವನ್ನು ನಮೂದಿಸಿದ ಕಾರಣ ಆ ಬಗ್ಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ. ನಿಪಿ 16 ರಲ್ಲಿ ನಿವೇಶನ ಸಂ. 1 ಹಾಗೂ ಅದರ ಉತ್ತರಕ್ಕೆ ಇರುವ ನಿವೇಶನ ಸಂಖ್ಯೆ 1 ಎ ಸ್ವತ್ತುಗಳಿಗೆ ವಿಸ್ತೀರ್ಣ ನಮೂದು ಇದೆ ಎಂದರೆ ಸರಿ. ನಾನು ನಿಪಿ 16 ರಲ್ಲಿ ತೋರಿಸಿರುವ ನಿವೇಶನ ಸಂಖ್ಯೆ 1 ಹಾಗೂ ಅದರ ಉತ್ತರಕ್ಕೆ ಇರುವ ನಿವೇಶನ ಸಂಖ್ಯೆ 1 ಎ ಸ್ವತ್ತುಗಳನ್ನು ಅಳತೆ ಮಾಡಿದ್ದೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ಹೌದು, ದಾವಾ ಅನುಸೂಚಿಯ ಪ್ರಕಾರ ಅಳತೆ ಮಾಡಿದ್ದು ಆ ವಿಸ್ತೀರ್ಣಕ್ಕೂ ನಿಪಿ 16 ರಲ್ಲಿ ನಮೂದಿಸಿರುವ ವಿಸ್ತೀರ್ಣಕ್ಕೂ ವ್ಯತ್ಯಾಸ ಇದೆ. ಆ ವಿಚಾರವನ್ನು ನಾನು ವಾದಿಗಳ ಸೂಚನೆಗಳಿಗೆ ಉತ್ತರಿಸುವಾಗ 1 ನೇ ಸೂಚನೆಗೆ ಆ ಬಗ್ಗೆ ನಮೂದಿಸಿರುತ್ತೇನೆ. ಸದರಿ ಉತ್ತರದಲ್ಲಿ ನಾನು ಅಳತೆಯನ್ನು ನಮೂದಿಸಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ಸ್ಥಳದಲ್ಲಿ ಗಡಿ ಕಲ್ಲುಗಳ ಇಲ್ಲದೆ ಇದ್ದುದರಿಂದ ದಾವಾ ಅನುಸೂಚಿಯಲ್ಲಿ ನಮೂದಿಸಿದ ವಿವರಗಳಂತೆ ಸ್ವತ್ತನ್ನು Demarkete ಮಾಡಲು ಸಾಧ್ಯವಾಗಲಿಲ್ಲ. ದಾವಾ ಅನುಸೂಚಿಗಳಲ್ಲಿ ಸ್ವತ್ತಿನ ಸಂಖ್ಯೆ ಹಾಗೂ ಅವುಗಳ ಅಳತೆ ಮತ್ತು ಚೆಕ್ಕು ಬಂದಿಗಳು ನಮೂದು ಇವೆ ಎಂದರೆ ಸರಿ. ಸಾಕ್ಷಿ ನುಡಿಯುತ್ತಾರೆ ಅದಕ್ಕೆ ಅನುಗುಣವಾಗಿ ಯಾವುದೇ ಸರ್ವೆ ದಾಖಲೆಗಳು ಇರುವುದಿಲ್ಲ ಹಾಗೂ ಯೋಜನಾ ಪ್ರಾಧಿಕಾರದಿಂದ ಯಾವುದೇ ಅನುಮೋದಿತ ನಕ್ಷೆಯನ್ನು ಹಾಜರು ಪಡಿಸಿರುವುದಿಲ್ಲ. ಅನುಮೋದಿತ ನಕ್ಷೆ ಅಥವಾ ಸರ್ವೆ ದಾಖಲೆಗಳು ಇಲ್ಲದ ಹೊರತು ಸ್ವತ್ತಿನ ಅಳತೆಯನ್ನು ಮಾಡಲು ಸಾಧ್ಯವಿಲ್ಲ ಎಂದು ನ್ಯಾಯಾಲಯದ ಆದೇಶ ಅಥವಾ ಮೇಲಾಧಿಕಾರಿಗಳ ಸೂಚನೆ ಇತ್ತೆ ಎಂದರೆ ಸಾಕ್ಷಿ ನುಡಿಯುತ್ತಾರೆ ನಿಯಮದಂತೆ ಅನುಮೋದಿತ ನಕ್ಕೆ

ಅಥವಾ ಸರ್ವೆ ದಾಖಲೆಗಳು ಇಲ್ಲದ ಹೊರತು ಸ್ವತ್ತಿನ ಅಳತೆಯನ್ನು ಮಾಡಲು ಸಾಧ್ಯವಾಗುವುದಿಲ್ಲ. ವಾದಿಯ ಕ್ರಯ ಪತ್ರದಲ್ಲಿ ನಮೂದಿಸಿದ್ದ ಅನುಸೂಚಿ ವಿವರಗಳ ಆಧಾರದಲ್ಲಿ ಸದರಿ ನಿವೇಶನಗಳನ್ನು ಗುರುತಿಸಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ನುಡಿಯುತ್ತಾರೆ ಆ ರೀತಿ ಗುರುತಿಸಲು ಸೂಚನಾ ಪತ್ರದಲ್ಲಿ ಯಾವುದೇ ಸೂಚನೆಗಳು ಇರಲಿಲ್ಲ.

ಸರ್ವೆ ನಂಬರ್ 48 ರ ಪಶ್ಚಿಮಕ್ಕೆ ಚರ್ಚ್ ರಸ್ತೆ ಇದೆ ಎಂದರೆ ಸರಿ. ಸದರಿ ಚರ್ಚ್ ರಸ್ತೆಯನ್ನು ಆಧಾರವಾಗಿ ಇಟ್ಟುಕೊಂಡು ದಾವಾ ಸ್ವತ್ತನ್ನು ಅಳತೆ ಮಾಡಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ನುಡಿಯುತ್ತಾರೆ ಆ ಬಗ್ಗೆ ಸೂಚನೆಗಳು ಇರಲಿಲ್ಲ ಹಾಗೂ ಸದರಿ ಚರ್ಚ್  ರಸ್ತೆಯ ಅಗಲ ಎಷ್ಟು ಎಂಬ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿಲ್ಲದ ಕಾರಣ ಚರ್ಚ್  ರಸ್ತೆಯನ್ನು ಆಧಾರವಾಗಿ ಇಟ್ಟುಕೊಂಡು ದಾವಾ ಸ್ವತ್ತನ್ನು ಅಳತೆ ಮಾಡಲು ಸಾಧ್ಯವಿಲ್ಲ. ವಾದಿಯ ಸೂಚನೆಯಲ್ಲಿ ದಾವಾ ಸ್ವತ್ತುಗಳ ಅಳತೆಯನ್ನು ಪಡೆದುಕೊಳ್ಳಲು ಸೂಚನೆ ಇತ್ತು ಎಂದರೆ ಸರಿ. ಸದರಿ ಸೂಚನೆಯ ಪ್ರಕಾರ ನಾನು ದಾವಾ ಸ್ವತ್ತನ್ನು ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಅಳತೆ ಏನು ಎಂದರೆ ಸಾಕ್ಷಿ ನುಡಿಯುತ್ತಾರೆ  ದಾವಾ ಸ್ವತ್ತುಗಳು ಅಸ್ತಿತ್ವದಲ್ಲಿ ಇಲ್ಲ. ದಾವಾ ಸ್ವತ್ತುಗಳಲ್ಲಿ ಏನು ಇದೆ ಎಂದರೆ ಸಾಕ್ಷಿ ನುಡಿಯುತ್ತಾರೆ ದಾವಾ ಸ್ವತ್ತುಗಳನ್ನು ಭೌತಿಕವಾಗಿ ಗುರುತಿಸಲು ಸಾಧ್ಯವಾಗಿರುವುದಿಲ್ಲ.  ಭೌತಿಕವಾಗಿ ಅಲ್ಲಿ ಕೃಷಿ ಚಟುವಟಿಕೆ ಇರುವ ಜಮೀನು ಇಲ್ಲ ಎಂದರೆ ಸರಿ. ಸರ್ವೆ ನಂಬರ್ 48/2 ರ ಸ್ವತ್ತನ್ನು ಗುರುತಿಸಲು ಸದರಿ ಸ್ವತ್ತಿಗೆ ಗಡಿ ಕಲ್ಲುಗಳು ಇರಲಿಲ್ಲ. ಸಾಕ್ಷಿ ನುಡಿಯುತ್ತಾರೆ ಅಳತೆ ಇತ್ತು. ದಾವೆಯ

ಅನುಸೂಚಿಗಳು ಹಾಗೂ ವಾದಿಯ ಕ್ರಯ ಪತ್ರಗಳಲ್ಲಿ ಸ್ವತ್ತುಗಳ ಅಳತೆಗಳು ಇದ್ದವು ಎಂದರೆ ಸಾಕ್ಷಿ ನುಡಿಯುತ್ತಾರೆ ಹೌದು, ಆದರೆ ಸದರಿ ಅಳತೆಯ ಸ್ವತ್ತುಗಳು ನಿರ್ದಿಷ್ಟವಾಗಿ ಇಂತಹ ಸ್ಥಳದಲ್ಲಿ ಬರುತ್ತವೆ ಎಂದು ತೋರಿಸುವ ನಕ್ಷೆಗಳು ಇರಲಿಲ್ಲ. ದಾವಾ ಅನುಸೂಚಿಗಳಲ್ಲಿ ಸ್ವತ್ತುಗಳ ಚೆಕ್ಕು ಬಂದಿಗಳನ್ನು ನಮೂದಿಸಲಾಗಿತ್ತು ಎಂದರೆ ಸರಿ. ಸದರಿ ಚೆಕ್ಕು ಬಂದಿಯ ಆಧಾರದಲ್ಲಿ ದಾವಾ ಸ್ವತ್ತನ್ನು ಗುರುತಿಸಲು ನಾನು ಪ್ರಯತ್ನಿಸಿದ್ದೇನೆ. ಆ ರೀತಿ ಅಳತೆ ಮಾಡುವಾಗ ದಾವಾ ಸ್ವತ್ತುಗಳ ಅಳತೆ ಎಷ್ಟು ಇತ್ತು ಎಂದರೆ ಸಾಕ್ಷಿ ನುಡಿಯುತ್ತಾರೆ ಭೌತಿಕವಾಗಿ ಚೆಕ್ಕು ಬಂದಿ ಇಲ್ಲದ ಕಾರಣ ಅಳತೆ ಎಷ್ಟು ಎಂದು ನಿರ್ಧರಿಸಲು ಸಾಧ್ಯವಾಗಲಿಲ್ಲ. ಪ್ರತಿವಾದಿಗಳ ಕ್ರಯ ಪತ್ರದ ಪ್ರಕಾರ ಅಲ್ಲಿ ಸ್ವತ್ತು ಇದೆ ಎಂದರೆ ಸಾಕ್ಷಿ ನುಡಿಯುತ್ತಾರೆ ಕ್ರಯ ಪತ್ರದಂತೆ ಪ್ರತಿವಾದಿಯ ಸ್ವತ್ತನ್ನು ಗುರುತಿಸಲು ಯಾವುದೇ ಸೂಚನೆಗಳು ಇರಲಿಲ್ಲ. ನನ್ನ ವರದಿಯಲ್ಲಿ ನಾನು ಪ್ರತಿವಾದಿಯ ಕ್ರಯ ಪತ್ರವನ್ನು ನೋಡಿದ ಬಗ್ಗೆ ನಮೂದಿಸಿದ್ದೇನೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ನಮೂದಿಸಿರುವ ಚೆಕ್ಕು ಬಂದಿಯ ಪ್ರಕಾರ ಭೌತಿಕವಾಗಿ ಆ ಸ್ವತ್ತು ಅಲ್ಲಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ಅಸ್ತಿತ್ವದಲ್ಲಿ ಇದೆ ಆದರೆ ಕ್ರಯ ಪತ್ರದಲ್ಲಿ ಚೆಕ್ಕು ಬಂದಿಯನ್ನು ನಮೂದಿಸುವಾಗ ಪೂರ್ವ ಮತ್ತು ಪಶ್ಚಿಮದ ಚೆಕ್ಕು ಬಂದಿಯನ್ನು ವ್ಯತ್ಯಾಸ ಮಾಡಿ ನೀಡಿದ್ದಾರೆ. ನನ್ನ ವರದಿಯಲ್ಲಿ ಕ್ರಯ ಪತ್ರದಲ್ಲಿ ನಮೂದಾಗಿರುವ ನಾಲ್ಕು ದಿಕ್ಕುಗಳ ಚೆಕ್ಕು ಬಂದಿಗಳು ಹಾಗೂ ವಾಸ್ತವತೆಯಲ್ಲಿ ಇರುವ 4 ದಿಕ್ಕುಗಳ ಚೆಕ್ಕು ಬಂದಿಗಳು ಬೇರೆ ಬೇರೆ ಇರುವುದಾಗಿ ನಮೂದಿಸಿದ್ದೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ಹೌದು, ಪೂರ್ವ ಪಶ್ಚಿಮ, ಉತ್ತರ ದಕ್ಷಿಣಗಳ ಚೆಕ್ಕು ಬಂದಿಗಳು

ಅದಲು ಬದಲಾಗಿವೆ. ನನ್ನ ವರದಿಯಲ್ಲಿ ಖಂಡಿಕೆ 7 ರಲ್ಲಿ (ಪುಟ ಸಂಖ್ಯೆ 211)ಯಾವ ಆಧಾರದಲ್ಲಿ ನಮೂದಿಸಿದ್ದೀರಿ ಎಂದರೆ ಸಾಕ್ಷಿ ನುಡಿಯುತ್ತಾರೆ  ನಾನು ಪ್ರತಿವಾದಿಯ ಸೂಚನೆಯ ಆಧಾರದಲ್ಲಿ ನಮೂದಿಸಿಲ್ಲ ಸ್ಥಳದಲ್ಲಿ ಕಂಡು ಬಂದ ವಿಚಾರವನ್ನು ನ್ಯಾಯಾಲಯಕ್ಕೆ ತಿಳಿಸುವ ಉದ್ದೇಶದಿಂದ ನಮೂದಿಸಿದ್ದೇನೆ. ನನ್ನ ವರದಿಯಲ್ಲಿ ಖಂಡಿಕೆ 7 ರಲ್ಲಿ (ಪುಟ ಸಂಖ್ಯೆ 211) ನಮೂದಿಸಿರುವ ವಾಸ್ತವ ಚೆಕ್ಕು ಬಂದಿ ನಿಪಿ 16 ರ ನಿವೇಶನ ಸಂಖ್ಯೆ 1 ಹಾಗೂ ಅದರ ಉತ್ತರಕ್ಕೆ ಇರುವ ನಿವೇಶನ ಸಂಖ್ಯೆ 1 ಎ ಸ್ವತ್ತಿಗೆ ಸರಿ ಹೊಂದುತ್ತದೆ ಎಂದರೆ ಸರಿಯಲ್ಲ.  ಪ್ರತಿವಾದಿಯ ಕ್ರಯ ಪತ್ರದ ಪ್ರಕಾರ ಮಂಜುಳಮ್ಮ ರವರು ಖರೀದಿಸಿದ ಸ್ವತ್ತಿನ ವಿಸ್ತೀರ್ಣ 6 1/2 ಗುಂಟೆ. ವಾಸ್ತವಾಂಶದಲ್ಲಿ ಅಷ್ಟು ವಿಸ್ತೀರ್ಣ ಅಲ್ಲಿ ಇಲ್ಲ. ವಾಸ್ತವದಲ್ಲಿ ಅದರ ವಿಸ್ತೀರ್ಣ 4 1/2 ಗುಂಟೆ ಇದೆ. ನನ್ನ ವರದಿಯಲ್ಲಿ ವಾಸ್ತವದಲ್ಲಿ ಸರ್ವೆ ನಂಬರ್ 48/2 ರ ವಿಸ್ತೀರ್ಣ 3 ಮುಕ್ಕಾಲು ಗುಂಟೆ ಎಂದು ನಮೂದು ಇದೆ. ಸರ್ವೆ ನಂಬರ್ 48/2 ರ ದಕ್ಷಿಣಕ್ಕೆ 48/1 ರಲ್ಲಿ 1 ಗುಂಟೆ ಸ್ವತ್ತನ್ನು ಪ್ರತಿವಾದಿಗಳು ಹೊಂದಿರುತ್ತಾರೆ. ಆ ರೀತಿ ಹೇಳಲು ಏನು ಆಧಾರ ಇದೆ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಗೊತ್ತಿಲ್ಲ.

ನಾನು ಸ್ಥಳಕ್ಕೆ ಹೋದಾಗ ವಾದಿಗಳು ಸಹಾ ಬಂದಿದ್ದರು ಎಂದರೆ ಸರಿ. ವಾದಿಗಳು ಅವರ ಸ್ವತ್ತನ್ನು ತೋರಿಸಿ ಅದನ್ನು ಅಳತೆ ಮಾಡಲು ಹೇಳಿದರು ಎಂದರೆ ಸರಿ. ನಾನು ಅದನ್ನು ಅಳತೆ ಮಾಡಿರುತ್ತೇನೆ. ಆ ಬಗ್ಗೆ ನಾನು ನನ್ನ ವರದಿಯೊಂದಿಗೆ ಲಗತ್ತಿರುವ ಕ್ರಮ ಸಂಖ್ಯೆ  2 ರಲ್ಲಿ ತಿಳಿಸಿರುತ್ತೇನೆ. ಸದರಿ ನಕ್ಷೆಯಲ್ಲಿ ನಮೂದಿಸಿರುವ ನಿವೇಶನ ಸಂಖ್ಯೆ 1 ಹಾಗೂ ಅದರ ಉತ್ತರಕ್ಕೆ ಇರುವ ನಿವೇಶನ ಸಂಖ್ಯೆ 1 ಎ ಸ್ವತ್ತುಗಳು

ದಾವಾ ಸ್ವತ್ತುಗಳು ಎಂದರೆ ಸರಿ. ಅವುಗಳಲ್ಲಿ ನಮೂದಿಸಿರುವ ವಿಸ್ತೀರ್ಣಗಳು ದಾವಾ ಸ್ವತ್ತುಗಳು ವಿಸ್ತೀರ್ಣಗಳು ಎಂದರೆ ಸರಿ. ದಾವಾ ಸ್ವತ್ತುಗಳನ್ನು ಭೌತಿಕವಾಗಿ ಗುರುತಿಸಲು ಹಾಗೂ ಅಳತೆ ಮಾಡಲು ಸಾಧ್ಯ ಇದ್ದರೂ ಸಹಾ ನಾನು ಉದ್ದೇಶ ಪೂರ್ವಕವಾಗಿ ಅವುಗಳನ್ನು ಅಳತೆ ಮಾಡಿಲ್ಲ ಹಾಗೂ ಗುರುತಿಸಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳೊಂದಿಗೆ ಸೇರಿಕೊಂಡು ದಾವಾ ಸ್ವತ್ತುಗಳು ಭೌತಿಕವಾಗಿ ಅಸ್ತಿತ್ತದಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸೂಚನಾ ಪತ್ರಗಳಿಗೆ ಸರಿಯಾಗಿ ಉತ್ತರ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
(ಪ್ರಭಾರ) 5 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.